ಗ್ರಾಮ ಪಂಚಾಯತ್ ಅಧ್ಯಕ್ಷರ ಅವಧಿ

2428(2231); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಈಗಿರುವ ಗ್ರಾಮ ಪಂಚಾಯತ್ ಅಧ್ಯಕ್ಷರ 20 ತಿಂಗಳ ಅವಧಿಯನ್ನು 5 ವರ್ಷಕ್ಕೆ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಮುಂದಿನ ಚುನಾವಣೆಗೆ ಮುನ್ನ ಈ ಬಗ್ಗೆ ತಿದ್ದುಪಡಿ ಮಾಡಲಾಗುವುದೇ?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಮಾಜಿ ವಿಧಾನ ಸಭಾ ಅಧ್ಯಕ್ಷರು ಹಾಗೂ ಹಾಲಿ ವಿಧಾನಸಭಾ ಸದಸ್ಯರಾದ ಶ್ರೀ ಕೆ.ಆರ್. ರಮೇಶ್ ಕುಮಾರ್ ರವರ ಅಧ್ಯಕ್ಷತೆಯಲ್ಲಿನ ತಿದ್ದುಪಡಿ ಸಮಿತಿಯು ಪ್ರಸ್ತುತ ಗ್ರಾಮ ಪಂಚಾಯತಿ ಅಧ್ಯಕ್ಷರ ಅವಧಿ 30 ತಿಂಗಳಿದ್ದು 5 ವರ್ಷಕ್ಕೆ ಹೆಚ್ಚಿಸುವ ಬಗ್ಗೆ ಶಿಫಾರಸ್ಸು ಮಾಡಿದ್ದು, ಈ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಆ) ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ ಸ್ಥಾಪನೆ

2429(2232); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಸ್ಥಾಪನೆ ಮಾಡಲಾಗುವುದು;

ಇ) ಸದರಿ ವಿಶ್ವವಿದ್ಯಾಲಯದ ಸ್ಥಾಪನೆಯ ಉದ್ದೇಶವೇನು;

ಈ) ಸದರಿ ವಿಶ್ವವಿದ್ಯಾಲಯವನ್ನು ಎಲ್ಲಿ ಸ್ಥಾಪಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಹೌದು

ಆ) ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿಗಾಗಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಅಗತ್ಯವಿರುವ ಕ್ರಮಗಳನ್ನು ಕೈಗೆತ್ತಿಕೊಳ್ಳಲು ಅನುವಾಗುವಂತೆ, ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಒಳಗೊಂಡ ವರದಿಯನ್ನು ಸಿದ್ಧಪಡಿಸಲು ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಎಸ್.ವಿ. ರಂಗನಾಥ್, ಭಾಆಸೇ ರವರ ಅಧ್ಯಕ್ಷತೆಯಲ್ಲಿ 13 ಸದಸ್ಯರನ್ನು ಒಳಗೊಂಡ ಉನ್ನತಮಟ್ಟದ ತಜ್ಞರ ಸಮಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 142 ಜಿಪಸ 2013 ದಿನಾಂಕ: 31.12.2013 ರಲ್ಲಿ ರಚಿಸಲಾಗಿತ್ತು. ಈ ಸಮಿತಿಯು ತನ್ನ ಅಂತಿಮ ವರದಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ ಸ್ಥಾಪನೆಯ ಕರಡು ವಿಧೇಯಕವನ್ನು ಸಿದ್ಧಪಡಿಸಿ ಮಾನ್ಯ ಮುಖ್ಯಮಂತ್ರಿಯವರಿಗೆ ದಿನಾಂಕ: 21.02.2015 ರಂದು ಸಲ್ಲಿಸಿರುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ ಸ್ಥಾಪನೆಯ ಪ್ರಸ್ತಾಪನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಇ) ವಿಶ್ವವಿದ್ಯಾಲಯ ಸ್ಥಾಪನೆಯ ಪ್ರಮುಖ ಉದ್ದೇಶಗಳು ಈ ಕೆಳಕಂಡಂತಿವೆ:

1. ಗ್ರಾಮೀಣಾಭಿವೃದ್ಧಿಗಾಗಿ ವಿಶ್ವವಿದ್ಯಾಲಯವು ಗ್ರಾಮೀಣಾಭಿವೃದ್ಧಿ ಯೋಜನಾ ಪ್ರಕ್ರಿಯೆ ಹಾಗೂ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರವಹಿಸುವುದು.
2. ರಾಷ್ಟ್ರ/ರಾಜ್ಯ ಸರ್ಕಾರಗಳು ಅಥವಾ ಕರ್ನಾಟಕ ರಾಜ್ಯದ ವಿವಿಧ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳು ಈಗಾಗಲೇ ತಮ್ಮಲ್ಲಿ ಅಳವಡಿಸಿಕೊಂಡಿರುವ ಉತ್ತಮ ಪದ್ಧತಿಗಳು ಹಾಗೂ ಯೋಜನೆಗಳನ್ನು ತಾತ್ವಿಕವಾಗಿ ವಿಶ್ಲೇಷಣೆಗೊಡಪು ಅವುಗಳಿಗೆ ರಾಜ್ಯ ಮಟ್ಟದಲ್ಲಿ ಪ್ರೋತ್ಸಾಹ ದೊರಕಿಸಿಕೊಡುವುದು

3. ಗ್ರಾಮೀಣಾಭಿವೃದ್ಧಿ ಕ್ಷೇತ್ರದ ಆದ್ಯತೆ ಹಾಗೂ ಅಗತ್ಯತೆಗಳಿಗೆ ಅನುಗುಣವಾಗಿ ಹೊಸ ಆವಿಷ್ಕಾರ, ಸಂಶೋಧನೆಗಳನ್ನು ಗ್ರಾಮೀಣ ಜನರಿಗೆ ತಲುಪಿಸಲು ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯವು ಸೇತು ಬಂಧುವಾಗಿ ಕಾರ್ಯನಿರ್ವಹಿಸುವುದು.
4. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪ್ರಜಾಸತ್ತಾತ್ಮಕ ಬಲಪಡಿಸಲು ಹಲವು ಆಡಳಿತದಲ್ಲಿರುವ ವಿಷಯಗಳಲ್ಲಿ ಬದಲಾವಣೆ ತರಲು ಅಧ್ಯಯನ ಮಾಡುವುದು.
5. ಗ್ರಾಮೀಣ ಜನರಿಗೆ ನೈಸರ್ಗಿಕ ಕೃಷಿ, ಗ್ರಾಮೀಣ ಪ್ರದೇಶದಲ್ಲಿ ಪಾರಂಪರಿಕವಾದ ಜಲಸಂಪನ್ಮೂಲ ರಕ್ಷಣೆ ಅಂತರ್ಜಲದ ಸದುಪಯೋಗ, ನವೀಕರಿಸಬಹುದಾದ ಇಂಧನ ಸಂಪನ್ಮೂಲ ಬಳಕೆ, ಗ್ರಾಮೀಣಾಭಿವೃದ್ಧಿಗಾಗಿ ಸಮುಚಿತ ತಂತ್ರಜ್ಞಾನ, ಸುಸ್ಥಿರ ಪ್ರಗತಿಗಾಗಿ ಕೃಷಿ ಗ್ರಾಮೀಣ ಪರ್ಯಾವರಣದ ಸುರಕ್ಷೆ ಮತ್ತು ಸಂರಕ್ಷಣೆ, ಪರಿಸರ ವಿಜ್ಞಾನ, ಸಾಮಾಜಿಕ ವಿಚಾರಗಳು, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯತೆ ಕುರಿತು ಜನಜಾಗೃತಿಗೆ ನೆರವಾಗುವಂತಹ ಜನಶಕ್ತಿಯನ್ನು ರೂಪಿಸುವುದು.
6. ರಾಜ್ಯದ ವಿವಿಧ ಇಲಾಖೆಗಳಲ್ಲಿ ಗ್ರಾಮೀಣಾಭಿವೃದ್ಧಿಗಾಗಿ ಮೀಸಲಿರಿಸಿರುವ ಕಾರ್ಯಕ್ರಮಗಳ ವಂಟನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ವಿಶ್ವವಿದ್ಯಾಲಯವು ಮಾರ್ಗದರ್ಶನ ನೀಡುವುದು.
7. ಅತಿ ಹಿಂದುಳಿದ ಪ್ರದೇಶ / ಗ್ರಾಮ / ಸಮುದಾಯಗಳ ಮೇಲೆ ವಿಶೇಷ ಆಸ್ಥೆ ವಹಿಸುವ ಜೊತೆಗೆ ಉದ್ಯಮಶೀಲತೆಗೆ ದಾರಿ ಮಾಡಿಕೊಡುವ ಪ್ರಾದೇಶಿಕ, ಗ್ರಾಮ ಮತ್ತು ಸಮುದಾಯದಲ್ಲಿನ ಯುವಜನರಲ್ಲಿ ನಾಯಕತ್ವ ಮತು ವ್ಯವಸ್ಥಾಪನಾ ಕೌಶಲತೆ ಬೆಳೆಸಿ – ಉಳಿಸಲು ನೆರವಾಗುವಂತಹ ವಿಶೇಷ ಸಾಂಸ್ಥಿಕ ಸಂರಚನೆ ಮತ್ತು ಯೋಜನೆಗಳನ್ನು ಸೃಜಿಸುವುದು.

8 ಗಾಂಧೀಜಿಯವರ (ಗ್ರಾಮ ಸ್ವರಾಜ್) ಚಿಂತನೆ ಆಧರಿಸಿ ಸಮಗ್ರ ಮತ್ತು ಸುಸ್ಥಿರ ಗ್ರಾಮೀಣಾಭಿವೃದ್ಧಿ ಗುರಿಸಾಧಿಸಲು ವರ್ಗರಹಿತ, ಜಾತಿರಹಿತ ಹಾಗೂ ಜನಾಂಗರಹಿತ ಸಮಾಜ ಪ್ರವರ್ತಿಸುವ ಮುಖಾಂತರ ಸೇವೆ ನೀಡಿಕೆ ಉದ್ಯೋಗ ಮತ್ತು ಸಂಪತ್ತು ಸೃಷ್ಟಿಯೆಡೆಗೆ ಕೊಂಡೊಯ್ಯಲು ಅಗತ್ಯವಿರುವ ಕೌಶಲಾ ಶಿಸ್ತು ಪ್ರಕಾರಗಳಲ್ಲಿ ಉದ್ಯಮಶೀಲತೆ ಅಭಿವೃದ್ಧಿಗಾಗಿ ತರಬೇತಿ, ಕೌಶಲತೆ ಮತ್ತು ವಿಶೇಷ ಪೋಷಣಾ ಸೌಕರ್ಯಗಳ ಪೂರೈಕೆಗಾಗಿ ಸರ್ವತೋಮುಖ ಅವಕಾಶಗಳನ್ನು ಒದಗಿಸುವುದು.

ನಿಸರ್ಗದತ್ತ ಸಂಪನ್ಮೂಲಗಳ ವಿವೇಕಯುತ ನಿರ್ವಹಣೆಯ ಗುರಿಯೊಂದಿಗೆ ಸಮುದಾಯಿಕ ಭಾಗೀದಾರಿಕೆ ಮತ್ತು ನಿರ್ವಹಣೆಯ ಮುಖಾಂತರ ಜೈವಿಕ ವೈವಿಧ್ಯತೆ ಸಂರಕ್ಷಣೆ, ಭೂಮಿಯ ಫಲವತ್ತತೆ ಮತ್ತು ನವೀಕರಿಸಬಹುದಾದ ಇಂಧನ ವ್ಯವಸ್ಥಾಪನೆ ಬೀಜ ಬ್ಯಾಂಕ್ ಪಾರಂಪರಿಕ ಬಾಡಿಗೆ ಸೇವೆ, ಜೈವಿಕ ಕೃಷಿ, ಕೃಷಿ-ಅರಣ್ಯ ಪೋಷಣ ಬ್ಯಾಂಕ್ ಪಾರಂಪರಿಕ ಮೂಲಿಕಾ ಔಷಧ, ಆರೋಗ್ಯ ಮತ್ತು ಸೌಷ್ಠಿಕಾಂಶದ ಅಂಶ, ಗ್ರಾಮೀಣ ಉದ್ಯಮ ಮತ್ತು ಪಾರುಕಟ್ಟೆಗಳಿಗಾಗಿ ಜೈವಿಕ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಿ ಪ್ರವರ್ತಿಸುವುದು.

10. ಗ್ರಾಮ ಪಂಚಾಯತಿಗಳ ಸ್ವಂತ ಸಂಪನ್ಮೂಲ ಕ್ರೋಢೀಕರಿಸಲು ಅಧ್ಯಯನ ಸಲಹೆ ಮತ್ತು ಸಹಕಾರ ನೀಡುವುದು.

11. ಗ್ರಾಮೀಣಾಭಿವೃದ್ಧಿಯ ಭಾಗವಾಗಿರುವ ಜನಾಂಗದಲ್ಲಿ ಕೌಶಲ್ಯಾಭಿವೃದ್ಧಿ ಹಾಗೂ ಮಹಿಳಾ ಸಬಲೀಕರಣಕ್ಕೆ ಪೂರಕವಾದ ಸಂಶೋಧನೆ ಕೈಗೊಳ್ಳುವುದು.

12. ಸರ್ಕಾರಿ ಇಲಾಖೆಗಳಲ್ಲಿ ಹೊಸದಾಗಿ ನೇಮಿತರಾದವರಿಗೆ ಅಭಿವಿನ್ಯಾಸ ಕಾರ್ಯಕ್ರಮ, ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯನಿರತರಾದವರಿಗೆ ರಾಜ್ಯ ಸರ್ಕಾರದ ಸಹಯೋಗದಲ್ಲಿ ತರಬೇತಿ ಕಾರ್ಯಕ್ರಮ, ಸರ್ಕಾರಿ ಇಲಾಖೆಗಳ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಅಭಿವಿನ್ಯಾಸ ಕಾರ್ಯಕ್ರಮ ಹಾಗೂ ನಾನಾ ಪ್ರಜಾತಾಂತ್ರಿಕ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ನೀತಿ ರಚನೆ, ಆಡಳಿತ, ನಿರ್ವಹಣೆ ಮತ್ತು ಜಾರಿಯಲ್ಲಿ ಸರ್ಕಾರಕ್ಕೆ ನೆರವಾಗುವುದು.

13. ಉದ್ಯೋಗಾವಕಾಶಗಳಿಗೆ ಹೆಚ್ಚು ಆಸ್ಪದವೀಯುವಂತಹ ಕೌಶಲಾಭಿವೃದ್ಧಿಗೆ ಒತ್ತು ನೀಡುವ ವ್ಯಾಸಂಗ ಕ್ರಮಗಳ ಜಾರಿಗಾಗಿ ಬೆಳಗಾವಿ, ಧಾರವಾಡ ಕಲಬುರ್ಗಿ, ಮಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಗ್ರಾಮೀಣಾಭಿವೃದ್ಧಿಯ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸುವುದು.

ಈ) ಉನ್ನತಮಟ್ಟದ ತಜ್ಞರ ಸಮಿತಿಯು ತನ್ನ ಅಂತಿಮ ವರದಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯವನ್ನು ಡಾ॥ ನಂಜುಡಪ್ಪ ವರದಿಯ ಪ್ರಕಾರ ಉತ್ತರ ಕರ್ನಾಟಕವನ್ನು ಅತ್ಯಧಿಕವಾಗಿ ಹಿಂದುಳಿದ, ಅತಿ ಹಿಂದುಳಿದ ತಾಲ್ಲೂಕಗಳೆಂದು ವರ್ಗೀಕರಿಸಿದ್ದು, ಶಿಕ್ಷಣ ಸೌಲಭ್ಯಗಳು ಮತ್ತು ವಿಶ್ವವಿದ್ಯಾಲಯ ಸ್ಥಾಪನೆಗೆ ಅಗತ್ಯವಾಗಿ ಇರುವ ಮೂಲ ಸೌಕರ್ಯಗಳನ್ನು ಆಧರಿಸಿ, ಉತ್ತರ ಕರ್ನಾಟಕದ ಗದಗ ಜಿಲ್ಲೆಯ ಗದಗದಲ್ಲಿ ಸ್ಥಾಪಿಸಲು ಶಿಫಾರಸ್ಸು ಮಾಡಿರುತ್ತದೆ.